**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 778 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ವಿಷಯ | : | ಹೋಂ ಸ್ಟೇ ಮತ್ತು ರೆಸಾರ್ಟ್ |
| ಉತ್ತರಿಸುವ ಸಚಿವರು | | ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |
| ಉತ್ತರಿಸುವ ದಿನಾಂಕ | | 25.09.2020 |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | "ಹೋಂ ಸ್ಟೇ" ಮತ್ತು ರೆಸಾರ್ಟ್ ಗಳನ್ನು ಪ್ರಾರಂಭಿಸಲು ಇರುವ ನಿಯಮಗಳೇನು; (ಆದೇಶಗಳನ್ನು ಒದಗಿಸುವುದು) | ರಾಜ್ಯದಲ್ಲಿ ರೆಸಾರ್ಟ್ ಅನುಮತಿ ನೀಡಲು ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಪ್ರವಾಸೋದ್ಯಮ ನೀತಿ 2015-20 ರನ್ವಯ ಸರ್ಕಾರಿ ಆದೇಶ ಸಂಖ್ಯೆ: ಪ್ರಇ/128/ಪ್ರವಾಯೋ/2015, ದಿನಾಂಕ: 23.05.2016 ರಲ್ಲಿ ಅನುಷ್ಠಾನ ಮಾರ್ಗಸೂಚಿಗಳನ್ನು ಹೊರಡಿಸಿದೆ (ಆದೇಶದ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ).<br>ರಾಜ್ಯದಲ್ಲಿ ಹೋಂ ಸ್ಟೇ ಅನುಮತಿ ನೀಡಲು ಸರ್ಕಾರದ ಆದೇಶ ಸಂಖ್ಯೆ: ಪ್ರಇ/201/ಪ್ರವಾಯೋ/2016, ದಿನಾಂಕ: 13.10.2016 ರಲ್ಲಿ ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಆದೇಶವನ್ನು ಹೊರಡಿಸಿದೆ (ಆದೇಶದ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ). |
| ಆ) | ರಾಜ್ಯದಲ್ಲಿರುವ "ಹೋಂ ಸ್ಟೇ" ಮತ್ತು ರೆಸಾರ್ಟ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು) | ರಾಜ್ಯದಲ್ಲಿರುವ ಅನುಮೋದಿತ ರೆಸಾರ್ಟ್‌ಗಳ ಒಟ್ಟು ಸಂಖ್ಯೆ: 150 ಹಾಗೂ ಹೋಂಸ್ಟೇ ಗಳ ಒಟ್ಟು ಸಂಖ್ಯೆ: 1084 ಗಳು ಆಗಿರುತ್ತದೆ. ತಾಲ್ಲೂಕುವಾರು ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| ಇ) | ಅಕ್ರಮವಾಗಿ ನಡೆಸುತ್ತಿರುವ "ಹೋಂ ಸ್ಟೇ" ಮತ್ತು ರೆಸಾರ್ಟ್‌ಗಳು ಎಷ್ಟು ಹಾಗೂ ಸರ್ಕಾರ ಅವುಗಳ ವಿರುದ್ಧ ಕೈಗೊಂಡಿರುವ ಕ್ರಮ ಏನು; | ಕಾನೂನು ಬಾಹಿರವಾಗಿ ನಡೆಸುತ್ತಿರುವ ಹೋಂ ಸ್ಟೇ ಮತ್ತು ರೆಸಾರ್ಟ್ ಬಗ್ಗೆ ಸಮೀಕ್ಷೆ ಮಾಡಿರುವುದಿಲ್ಲ. ಆದರೆ ಈ ಬಗ್ಗೆ ಬಂದಂತಹ ದೂರುಗಳ ಮೇಲೆ ಕಾನೂನು ರೀತ್ಯಾ ಕ್ರಮವಹಿಸಲಾಗುವುದು. |
| ಈ) | "ಹೋಂ ಸ್ಟೇ" ಹಾಗೂ ರೆಸಾರ್ಟ್‌ಗಳಿಗೆ ಸಂಪರ್ಕ ಕಲ್ಪಿಸಲು ಅಕ್ರಮವಾಗಿ ಸಂರಕ್ಷಿತ ಅರಣ್ಯಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು) | ಬಂದಿಲ್ಲ. |

ಸಂಖ್ಯೆ: ಟಿಓಆರ್ 194 ಟಿಡಿಪಿ 2020.

(ಸಿ.ಟಿ. ರವಿ)

ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಅನುಬಂಧ -1



**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಪ್ರವಾಸೋದ್ಯಮ ನೀತಿ-2015-20 ರ ಅನುಷ್ಠಾನ ಸಂಬಂಧ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ - ಆದೇಶ.

---

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ. ಪ್ರಇ 81 ಪ್ರವಾಯೋ 2014, ದಿನಾಂಕ: 26.3.2015.
2. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ. ಪ್ರಇ/ಯೋ-4/169/2015-16, ದಿನಾಂಕ: 21.5.2016.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿ 2015-2020 ನ್ನು ಸದರಿ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ರೂಪಿಸಿ ಅಳವಡಿಸಲಾಗಿರುವ ರಿಯಾಯಿತಿ ಮತ್ತು ಉತ್ತೇಜಕಗಳೊಂದಿಗೆ ಜಾರಿಗೊಳಿಸಲು ಸರ್ಕಾರವು ಅನುಮೋದನೆ ನೀಡಿದೆ.

ಸದರಿ ಆದೇಶದಲ್ಲಿ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗೆ ಪೂರಕವಾಗಿ ಪ್ರವಾಸೋದ್ಯಮ ಕ್ಷೇತ್ರದಲ್ಲಿನ ವಿವಿಧ ಹೂಡಿಕೆ, ಸೇವಾವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಪ್ರತ್ಯೇಕ ಮಾರ್ಗಸೂಚಿಗಳನ್ನು ಹಾಗೂ ಪ್ರವಾಸೋದ್ಯಮ ನೀತಿಯನ್ವಯ ಲಭ್ಯವಾಗುವ ವಿವಿಧ ಉತ್ತೇಜಕ ಮತ್ತು ರಿಯಾಯಿತಿಗಳ ಕುರಿತು ಕೈಪಿಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿದೆ.

ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ಪ್ರವಾಸೋದ್ಯಮ ನೀತಿ 2015-20ರ ಅನುಷ್ಠಾನ ಸಂಬಂಧ ಸಿದ್ಧಪಡಿಸಿರುವ ಮಾರ್ಗಸೂಚಿಗಳನ್ನು ಕಳುಹಿಸುತ್ತಾ, ಸದರಿ ಮಾರ್ಗಸೂಚಿಗಳನ್ನು ಅನುಮೋದಿಸಿ ಸರ್ಕಾರದ ಆದೇಶವನ್ನು ಹೊರಡಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಪ್ರಇ 128 ಪ್ರವಾಯೋ 2015, ಬೆಂಗಳೂರು, ದಿನಾಂಕ: 23.05.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ ಪ್ರಇ 81 ಪ್ರವಾಯೋ 2014, ದಿನಾಂಕ: 26.3.2015 ರಲ್ಲಿ ಜಾರಿಗೆ ತಂದಿರುವ ಪ್ರವಾಸೋದ್ಯಮ ನೀತಿ 2015-2020 ರ ಅನುಷ್ಠಾನ ಸಂಬಂಧ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಪ್ರವಾಸೋದ್ಯಮ ನೀತಿ 2015–2020 ಅನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಸದರಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

28/5/16

[ಹೆಚ್.ಕೆ. ರವಿಮೂರ್ತಿ]
ಸರ್ಕಾರದ ಜಂಟಿ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.–ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಒದಗಿಸುವುದು.

ಪ್ರತಿ:

1. ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳಿಗೆ.
3. ಎಲ್ಲಾ ಪ್ರಾದೇಶಿಕ ಆಯುಕ್ತರು.
4. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ.
6. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಟಿ.ಡಿ.ಸಿ., ಖನಿಜ ಭವನ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಜೆ.ಎಲ್.ಆರ್., ಖನಿಜ ಭವನ, ಬೆಂಗಳೂರು.
9. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು.
10. ಮುಖ್ಯಸ್ಥರು, ಕರ್ನಾಟಕ ಟೂರಿಸಂ ವಿಷನ್ ಗ್ರೂಪ್, ಪ್ರವಾಸೋದ್ಯಮ ನಿರ್ದೇಶನಾಲಯ, ಖನಿಜ ಭವನ, ಬೆಂಗಳೂರು.
11. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
12. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿ.

ಅನುಬಂಧ-2

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: **ಹೋಂಸ್ಟೇಗಳ ನೋಂದಣಿಗಾಗಿ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.**

ಓದಲಾಗಿದೆ: 1] ಆದೇಶ ಸಂಖ್ಯೆ: ಕಸಂವಾಪ್ರ/32/ಪ್ರವಾಇ/2007, ದಿ: 12.07.2007.

2] ಆದೇಶ ಸಂಖ್ಯೆ: ಪ್ರಇ 429 ಪ್ರವಾಯೋ 2015 ದಿ:31-3-2016

3] ಸೇರ್ಪಡೆ ಆದೇಶ ಸಂಖ್ಯೆ: ಪ್ರಇ 201 ಪ್ರವಾಯೋ 2016 ದಿ:24-6-2016 ಮತ್ತು 27-8-2016.

4] ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರ ಕಡತ ಸಂಖ್ಯೆ: ಪ್ರಇ/ಯೋ-4/19/2016-17

* * * *

ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ[1]ರಲ್ಲಿ ಓದಲಾದ ಆದೇಶದಲ್ಲಿ ಪ್ರವಾಸಿಗರ ಹೋಟೆಲ್ ಕೊಠಡಿಗಳ ಬೇಡಿಕೆಯಲ್ಲಿ ಹೆಚ್ಚಳವಾದ್ದರಿಂದ **"ಅತಿಥಿ"** ಹೆಸರಿನ ಹೋಂಸ್ಟೇ ಯೋಜನೆಯನ್ನು ಪ್ರವಾಸೋದ್ಯಮ ಇಲಾಖೆ ಜಾರಿಗೆ ತಂದಿರುತ್ತದೆ. ಈ ಯೋಜನೆಯನ್ನು ಜಾರಿಗೆ ತಂದಿರುವ ಪ್ರಮುಖ ಉದ್ದೇಶವು ಭೇಟಿ ನೀಡುವ ಪ್ರವಾಸಿಗರು ಭಾರತೀಯ ಕುಟುಂಬದೊಂದಿಗೆ ವಾಸಿಸುವ ವಾತಾವರಣವನ್ನು ಹಾಗೂ ಸಾಂಪ್ರದಾಯಿಕ ಅನುಭವ, ಸಂಸ್ಕೃತಿ ಮತ್ತು ಆ ಪ್ರದೇಶದ ಆಹಾರ ಪದ್ಧತಿಗಳನ್ನು ಉತ್ತಮ ಗುಣಮಟ್ಟದ ಸೌಲಭ್ಯ ಮತ್ತು ಸೌಕರ್ಯಗಳನ್ನು ಯಾವುದೇ ರಾಜಿಯಿಲ್ಲದೇ ಕೊಠಡಿಗಳ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿರುತ್ತದೆ. ಈ ಯೋಜನೆಯಡಿ ಹೋಂಸ್ಟೇಗಳ ವರ್ಗೀಕರಣ ಮತ್ತು ಮರು ವರ್ಗೀಕರಣವನ್ನು ನಿರೂಪಿಸುತ್ತದೆ.

ಕರ್ನಾಟಕ ಪ್ರವಾಸೋದ್ಯಮ ನೀತಿ 2015-20ನ್ನು ಜಾರಿಗೊಳಿಸಿದ್ದು, ಇದರಲ್ಲಿ ವರ್ಗೀಕರಿಸಿರುವ ಪ್ರವಾಸೋದ್ಯಮ ಉತ್ಪನ್ನಗಳ ಪೈಕಿ ಹೋಂ ಸ್ಟೇ ಯೋಜನೆ ಕೂಡ ಒಂದಾಗಿದ್ದು, ಸದರಿ ನೀತಿಯಲ್ಲಿ ಕೆಲವು ಉತ್ತೇಜಕ ಮತ್ತು ರಿಯಾಯಿತಿಗಳನ್ನು ಹೋಂಸ್ಟೇಗಳಿಗೆ ನೀಡಲು ಪ್ರಸ್ತಾಪಿಸಲಾಗಿದೆ. ಪ್ರವಾಸೋದ್ಯಮ ಉತ್ಪನ್ನಗಳನ್ನು ಶ್ರೇಣೀಕರಿಸಲು ಕೆಲವು ರೇಟಿಂಗ್ ಏಜೆನ್ಸಿಗಳನ್ನು ಎಂಪ್ಯಾನಲ್ಡ್ ಮಾಡಿದ್ದು, ಹೋಂ ಸ್ಟೇ ಯೋಜನೆಯೂ ಒಳಗೊಂಡಂತೆ ಎಲ್ಲಾ ಪ್ರವಾಸೋದ್ಯಮ ಉತ್ಪನ್ನಗಳನ್ನು ಶ್ರೇಣೀಕರಿಸಲಾಗುತ್ತದೆ. ಈ ಹಿನ್ನಲೆಯಲ್ಲಿ ಹೋಂಸ್ಟೇಗಳ ಆರೋಗ್ಯಕರ ಬೆಳವಣಿಗೆಗೆ ಅವಕಾಶ ಕಲ್ಪಿಸಿಕೊಡಲು, ಹೋಂಸ್ಟೇಗಳ ನೋಂದಣಿ ಮಾಡಲು ಮೇಲೆ ಕ್ರಮಸಂಖ್ಯೆ[2]ರಲ್ಲಿ ಓದಲಾದ ಆದೇಶದಲ್ಲಿ ನೂತನ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ತದನಂತರ ಮೇಲೆ ಕ್ರಮಸಂಖ್ಯೆ[3]ರಲ್ಲಿ ಓದಲಾದ ಸೇರ್ಪಡೆ ಆದೇಶಗಳಲ್ಲಿ ಸದರಿ ಮಾರ್ಗಸೂಚಿಗಳಿಗೆ ಕೆಲವೊಂದು ಮಾರ್ಗಸೂಚಿಗಳನ್ನು ಸೇರ್ಪಡೆ ಮಾಡಲಾಗಿತ್ತು.

ಮೇಲೆ ಕ್ರಮಸಂಖ್ಯೆ[4]ರಲ್ಲಿ ಓದಲಾದ ಕಡತದಲ್ಲಿ, ಹೋಂಸ್ಟೇ ನಡೆಸಲು ಪಾಲಿಸಬೇಕಾದ ನಿಯಮಗಳನ್ನು ಹೋಂಸ್ಟೇ ರೇಟಿಂಗ್ ಮತ್ತು ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಆದೇಶ ದಿ:31-3-2016ರಲ್ಲಿ ಮಂಜೂರಾತಿ ನೀಡಲಾಗಿದೆ ಎಂದು ತಿಳಿಸುತ್ತಾ, ಹೋಂಸ್ಟೇಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸುವ ಉದ್ದೇಶದಿಂದ ಹಾಗೂ ಈ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ

ಇಲಾಖೆಯು ಇಚ್ಛಿಸಿದ್ದು, ಹೋಂಸ್ಟೇ ಸಂಬಂಧ ಹೊರಡಿಸಿರುವ ಮೇಲ್ಕಂಡ ಆದೇಶಗಳನ್ನು ಪಾಲಿಸಲು ಸೂಚಿಸಿದ್ದಲ್ಲಿ, ಹೋಂಸ್ಟೇ ಮಾಲೀಕರಿಗೆ, ಅಧಿಕಾರಿಗಳಿಗೆ ಗೊಂದಲ ಉಂಟಾಗಬಹುದೆಂದು ಇಲಾಖೆ ಅಭಿಪ್ರಾಯಪಟ್ಟಿರುತ್ತದೆಂದು, ವರದಿ ಮಾಡುತ್ತಾ, ಈಗಾಗಲೇ ಹೊರಡಿಸಿರುವ ಸರ್ಕಾರದ ಆದೇಶಗಳಲ್ಲಿರುವ ಅಂಶಗಳನ್ನು ಸೂಕ್ತವಾಗಿ ಎಂಗಡಿಸಿ ಪರಿಷ್ಕೃತ ಆದೇಶ ಹೊರಡಿಸುವಂತ ಪ್ರವಾಸೋದ್ಯಮ ನಿರ್ದೇಶಕರು ಕೋರಿದ್ದಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಹೋಂಸ್ಟೇ ಸಂಬಂಧ ಈಗಾಗಲೇ ಹೊರಡಿಸಿರುವ ಆದೇಶಗಳನ್ನು ರದ್ದುಪಡಿಸಿ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವುದು ಸೂಕ್ತವೆಂದು ಕಂಡುಬಂದಿರುವ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಪ್ರಇ 201 ಪ್ರವಾಯೋ 2016 ಬೆಂಗಳೂರು, ದಿನಾಂಕ:13-10-2016</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಹೋಂಸ್ಟೇ ನೊಂದಣಿಗಾಗಿ ಸರ್ಕಾರದ ಆದೇಶ ಸಂಖ್ಯೆ: (1) ಕಸಂವಾಪ್ರ/32/ಪ್ರವಾಇ/2007, ದಿ: 12-07-2007, (2) ಪ್ರಇ 429 ಪ್ರವಾಯೋ 2015 ದಿ:31-3-2016 ಮತ್ತು (3) ಸೇರ್ಪಡೆ ಆದೇಶ ಸಂಖ್ಯೆ: ಪ್ರಇ 201 ಪ್ರವಾಯೋ 2016 ದಿ:24-6-2016 ಮತ್ತು 27-8-2016ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ನು ರದ್ದುಪಡಿಸಲಾಗಿದೆ ಹಾಗೂ ಹೋಂಸ್ಟೇಗಳನ್ನು ನಡೆಸಲು ಈ ಕೆಳಕಂಡ ಪರಿಷ್ಕೃತ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಸರ್ಕಾರ ಆದೇಶಿಸಿದೆ.

## I. <u>ಹೋಂಸ್ಟೇಗಳ ನೋಂದಣಿ:</u>

1. ಹಾಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂಸ್ಟೇ ಮಾಲೀಕರು ಈ ಆದೇಶ ಹೊರಡಿಸಿರುವ ದಿನಾಂಕದಿಂದ 15-11-2016ರೊಳಗೆ ಆನ್‌ಲೈನ್‌ನಲ್ಲಿ ನೋಂದಣಿಯನ್ನು ಕಡ್ಡಾಯವಾಗಿ ಮಾಡಿಕೊಳ್ಳುವುದು.
2. ಕರ್ನಾಟಕ ಪ್ರವಾಸೋದ್ಯಮ ನೀತಿ 2015-2020 ಜಾರಿಗೆ ಬಂದಿದ್ದು, ಏಪ್ರಿಲ್ 01, 2016 ರಿಂದ ಪ್ರವಾಸೋದ್ಯಮ ನಿರ್ದೇಶನಾಲಯದಿಂದ ಹೋಂಸ್ಟೇಗಳಿಗೆ ಪ್ರಮಾಣಪತ್ರ ನೀಡುವ ಕಾರ್ಯವನ್ನು ಕೈಬಿಡಲಾಗಿದೆ.
3. ಪ್ರವಾಸೋದ್ಯಮ ಇಲಾಖೆಗೆ ನೇರವಾಗಿ ಹೋಂಸ್ಟೇ ಘಟಕಗಳು ಅರ್ಜಿ ಸಲ್ಲಿಸುವ ಹಾಗೂ ವರ್ಗೀಕರಣ ಶುಲ್ಕ ಮತ್ತು ನವೀಕರಣ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ.
4. ಜಿಲ್ಲಾಮಟ್ಟದ ಪ್ರವಾಸೋದ್ಯಮ ಕಚೇರಿಯ ಮುಖ್ಯಸ್ಥರು, ಹೋಂಸ್ಟೇ ಮಾಲೀಕರು ಆನ್‌ಲೈನ್‌ನಲ್ಲಿ ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿ ಶಿಫಾರಸ್ಸು ಮಾಡಿದ ವರದಿಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಪರಿಶೀಲಿಸಿ, ಹೋಂಸ್ಟೇಗಳನ್ನು ನೋಂದಣಿ ಮಾಡಲು ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ 2015 ರನ್ವಯ ಅಧಿಕಾರವನ್ನು ಪ್ರತ್ಯಾಯೋಜಿಸಿದೆ.
5. ಹೋಂಸ್ಟೇಗಳಿಗೆ ಸಂಬಂಧಪಟ್ಟಂತೆ ಯಾವುದೇ ವಿಷಯವನ್ನು ಪ್ರವಾಸೋದ್ಯಮ ನೀತಿ 2015-2020ರಲ್ಲಿ ತಿಳಿಸಿರುವಂತೆ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಮುಂದೆ ಮಂಡಿಸಿ, ತೀರ್ಮಾನ ಕೈಗೊಳ್ಳಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

6. ರಾಜ್ಯದಲ್ಲಿ ಹೋಂಸ್ಟೇಗಳು ಸುಲಲಿತವಾಗಿ ಕಾರ್ಯನಿರ್ವಹಿಸುವಂತೆ ಅನುವು ಮಾಡಿಕೊಡಲು ಸಂಬಂಧಪಟ್ಟ ಪೋಲೀಸ್ ಠಾಣೆಗಳು ಗ್ರಾಮ ಪಂಚಾಯತಿ/ಪುರಸಭೆ/ನಗರಸಭೆ ಇತ್ಯಾದಿ ಸ್ಥಳೀಯ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರವನ್ನು ಒದಗಿಸತಕ್ಕದ್ದು. ಸದರಿ ನಿರಾಕ್ಷೇಪಣಾ ಪತ್ರ ಈಗಾಗಲೇ ಪಡೆದಿದ್ದಲ್ಲಿ 06 ತಿಂಗಳು ಚಾಲ್ತಿಯೊಳಗಿರತಕ್ಕದ್ದು.
7. ಒಬ್ಬ ಹೋಂಸ್ಟೇ ಮಾಲೀಕರು ಹಲವು ಹೋಂಸ್ಟೇ ನಡೆಸುತ್ತಿದ್ದಲ್ಲಿ, ಅವರು ವಾಸಿಸುತ್ತಿರುವ ಒಂದು ಹೋಂಸ್ಟೇಯನ್ನು ಮಾತ್ರ ನೊಂದಣಿ ಮಾಡಬಹುದಾಗಿದೆ.
8. ಪಾಲುದಾರರಾಗಿ ನಡೆಸುವ ಹೋಂಸ್ಟೇಯನ್ನು ಹತ್ತಿರದ ಸಂಬಂಧಿಗಳು, ಅಂದರೆ ತಂದೆ/ತಾಯಿ/ಗಂಡ/ಹೆಂಡತಿ/ಮಗ/ಮಗಳು, ನಡೆಸುತ್ತಿದ್ದಲ್ಲಿ ಮಾತ್ರ ಹೋಂಸ್ಟೇಯನ್ನು ನೊಂದಣಿ ಮಾಡಬಹುದಾಗಿದೆ. ಆದರೆ ಕನಿಷ್ಠ ಒಬ್ಬರು ಪಾಲುದಾರರು ಆ ಹೋಂಸ್ಟೇನಲ್ಲಿ ವಾಸವಾಗಿರತಕ್ಕದ್ದು.
9. ಹೋಂಸ್ಟೇ ಮಾಲೀಕರು ಹೋಂಸ್ಟೇ ನಡೆಸುವ ಜೊತೆಗೆ ಇತರ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿದ್ದಲ್ಲಿ [ಅಂದರೆ ಉದಾಹರಣೆಗೆ ಕಾಫಿ ಕ್ಯೂರಿಂಗ್, ಜೇನು ಸಾಕಾಣಿಕೆ, ಹೈನುಗಾರಿಕೆ ಇತ್ಯಾದಿ] ಅದು ಹೋಂಸ್ಟೇ ನೊಂದಣಿಗೆ ಅಡಚಣೆಯಾಗತಕ್ಕದ್ದಲ್ಲ.
10. ಹೋಂಸ್ಟೇ ನೊಂದಣಿಯು ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ [ಸೌಲಭ್ಯ ಮತ್ತು ನಿಯಂತ್ರಣ] ಅಧಿನಿಯಮ 2015ರನ್ವಯ 5[ಐದು] ವರ್ಷಗಳ ಕಾಲ ಊರ್ಜಿತವಾಗಿರುತ್ತದೆ.

II **ಹೋಂಸ್ಟೇಗಳಿಗೆ ಮಾರ್ಗಸೂಚಿ:**

11. ಯಾವುದೇ ಏಕವ್ಯಕ್ತಿ ಅಥವಾ ಕುಟುಂಬವು ನಡೆಸಲು ಉದ್ದೇಶಿಸಿರುವ ಹೋಂಸ್ಟೇ ಘಟಕವು ಎಲ್ಲಿ ಕಾರ್ಯ ನಿರ್ವಹಿಸುತ್ತಿದೆಯೋ/ಕಾರ್ಯನಿರ್ವಹಿಸಲು ಉದ್ದೇಶಿಸಲಾಗಿದೆಯೋ ಆ ಆಸ್ತಿಯ ಮಾಲೀಕರಾಗಿರಬೇಕು.
12. ಯಾವುದೇ ಏಕವ್ಯಕ್ತಿ ಅಥವಾ ಕುಟುಂಬವು ರಾಜ್ಯದಲ್ಲಿ ಸ್ವತ: ಮಾಲೀಕತ್ವ ಹೊಂದಿರುವ ಉತ್ತಮ ಗುಣಮಟ್ಟದ ಮನೆಯು ಗರಿಷ್ಠ ಐದು (5) ಕೊಠಡಿಗಳನ್ನು ಕೇವಲ ಪ್ರವಾಸಿಗರ ವಸತಿಗಾಗಿಯೇ ಹೊಂದಿರಬೇಕು. ಕನಿಷ್ಠ ಮೂಲಸೌಲಭ್ಯಗಳನ್ನು ನಿರ್ದಿಷ್ಟ ಮತ್ತು ಗುಣಮಟ್ಟದ ಸೇವೆಯನ್ನು ಸದರಿ ಹೋಂಸ್ಟೇಗಳು ಒದಗಿಸತಕ್ಕದ್ದು.
13. ಉತ್ತಮ ಗುಣಮಟ್ಟವನ್ನು ಹೊಂದಿರುವ ಹಾಗೂ ಸುಗಮ ವಾಹನ ಸಂಚಾರಕ್ಕೆ ಅಗತ್ಯವಾದ ರಸ್ತೆ ಸಂಪರ್ಕವನ್ನು ಸದರಿ ಹೋಂಸ್ಟೇ ಹೊಂದಿರಬೇಕು.
14. ಪ್ರಸ್ತಾಪಿತ ಹೋಂಸ್ಟೇಯು ಹೋಟೆಲ್ ಅಥವಾ ವಾಣಿಜ್ಯ ಸಂಸ್ಥೆಯೆಂದು ನೊಂದಣಿಯಾಗಿರತಕ್ಕದ್ದಲ್ಲ ಹಾಗೂ ಹೋಟೆಲ್‌ಗಳಿಗೆ ಲಭ್ಯವಿರುವ ಯಾವುದೇ ಲಾಭಗಳನ್ನು ರಾಜ್ಯ ಅಥವಾ ಕೇಂದ್ರ ನೀತಿ/ಕಾಯಿದೆ/ ಮಾರ್ಗಸೂಚಿಗಳನ್ವಯ ಪಡೆದಿರಬಾರದು.
15. ಹೋಂಸ್ಟೇಯಲ್ಲಿರುವ ಪ್ರತಿ ಕೊಠಡಿಗಳ ವಿಸ್ತೀರ್ಣವು ಪ್ರವಾಸಿಗರಿಗೆ ಆರಾಮದಾಯಕವಾಗಿ ತಂಗಲು ಸಾಕಷ್ಟು ಸ್ಥಳಾವಕಾಶವನ್ನು ಹೊಂದಿರಬೇಕು.
16. ಹೋಂಸ್ಟೇಯ ಸ್ನಾನಗೃಹದ ವಿಸ್ತೀರ್ಣವು ಸಾಕಷ್ಟು ಸ್ಥಳಾವಕಾಶವನ್ನು ಹೊಂದಿರಬೇಕು.
17. ಹೋಂಸ್ಟೇಯ ಮಾಲೀಕರು ತನ್ನಲ್ಲಿರುವ ಸೌಲಭ್ಯಗಳು ಮತ್ತು ಇವುಗಳ ಬಳಕೆಗಾಗಿ ಪಾವತಿಸಬೇಕಾದ ದರಗಳನ್ನು ಅತಿಥಿಗಳಿಗೆ ನಿಖರವಾಗಿ ವಿವರಿಸಬೇಕು.

18. ಹೋಂಸ್ಟೇ ಘಟಕವು ಎಲ್ಲಾ ಸಮಯದಲ್ಲಿ ವಾಸಸ್ಥಳವನ್ನು ಅತಿಥಿಗಳಿಗೆ ಉತ್ತಮ ಸ್ಥಿತಿಯಲ್ಲಿ ಮತ್ತು ಶುಚಿಯಾಗಿಡತಕ್ಕದ್ದು. ಇದಲ್ಲದೆ ಗುಣಮಟ್ಟದ ಆರೋಗ್ಯ ನೈರ್ಮಲ್ಯ ಮತ್ತು ಅಗ್ನಿ ಸುರಕ್ಷತೆಯನ್ನು ಒಳಗೊಂಡಂತೆ ನಿಯಮಾನುಸಾರ ಸುರಕ್ಷತಾ ಕ್ರಮಗಳನ್ನು ತಪ್ಪದೇ ಅನುಸರಿಸತಕ್ಕದ್ದು.

19. ಪ್ರತಿ ಹೋಂಸ್ಟೇಯು ಅತಿಥಿಗಳ ವಿವರದ ಬಗ್ಗೆ ಒಂದು ನೋಂದಣಿ ಪುಸ್ತಕವನ್ನು ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಗಣಕೀಕರಣ ಮಾಡತಕ್ಕದ್ದು.

20. ಪ್ರತಿ ಅನುಮೋದಿತ ಹೋಂಸ್ಟೇ ಘಟಕವು ಈ ಕೆಳಕಂಡ ಪುಸ್ತಕ ಮತ್ತು ನೋಂದಣಿ ವಹಿಗಳನ್ನು ಇಡತಕ್ಕದ್ದು.

- ಹೋಂಸ್ಟೇ ಘಟಕದ ಸ್ವಾಗತ ಕೊಠಡಿ/ಮುಖ್ಯದ್ವಾರ/ಕಾಯ್ದಿರಿಸುವ ಕೊಠಡಿಯಲ್ಲಿ ದೂರು/ಸಲಹೆ ಪುಸ್ತಕ.
- ಭೇಟಿ ನೀಡುವ ಅತಿಥಿ/ಪ್ರವಾಸಿಗರ ನೋಂದಣಿ ಪುಸ್ತಕ.
- ಸಂಖ್ಯೆಯನ್ನು ಹೊಂದಿರುವ ತ್ರಿಪ್ರತಿಯ ಬಿಲ್ ಪುಸ್ತಕ.
- ಸಂಖ್ಯೆಯನ್ನು ಹೊಂದಿರುವ ದ್ವಿಪ್ರತಿಯ ಪಾವತಿ/ಮುಂಗಡ ಸ್ವೀಕೃತಿಯ ಪುಸ್ತಕ

21. ದೂರದಿಂದ ಸ್ಪಷ್ಟವಾಗಿ ಕಾಣುವಂತೆ ಪ್ರವಾಸೋದ್ಯಮ ಇಲಾಖೆಯ ಲಾಂಛನವನ್ನು ಒಳಗೊಂಡಂತೆ "ಕರ್ನಾಟಕ ಸರ್ಕಾರ ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ನೋಂದಾಯಿತ" ಎಂಬ ನಾಮಫಲಕವನ್ನು ಹೋಂಸ್ಟೇ ಘಟಕವನ್ನು ಸಂಪರ್ಕಿಸುವ ಕಟ್ಟಡದ ಮುಖ್ಯದ್ವಾರದ ಬಳಿ ಅಳವಡಿಸತಕ್ಕದ್ದು.

22. ಕರ್ನಾಟಕ ಪ್ರವಾಸೋದ್ಯಮ ನೀತಿ 2015-2020ರಲ್ಲಿ ವಿವರಿಸಿರುವಂತೆ ಹೋಂಸ್ಟೇಗಳಿಗೆ ಅನ್ವಯಿಸುವ ರಿಯಾಯಿತಿಗಳನ್ನು ಪಡೆಯಲು ಅರ್ಹತೆ ಹೊಂದಿರುತ್ತವೆ.

23. ಹಾಲಿ ಕಾರ್ಯನಿರ್ವಹಿಸುತ್ತಿರುವ ಹೋಂಸ್ಟೇಗಳು 15 ನವೆಂಬರ್ 2016ರ ಒಳಗಾಗಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸದೇ ಕಾರ್ಯನಿರ್ವಹಿಸಿದ್ದಲ್ಲಿ ಅಂತಹ ಹೋಂಸ್ಟೇಗಳನ್ನು ಕಾನೂನು ಬಾಹಿರವೆಂದು ಪರಿಗಣಿಸಿ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳಲಾಗುವುದು.

24. ಈ ಮೇಲ್ಕಂಡ ಮಾರ್ಗಸೂಚಿಗಳು ಹಾಲಿ ಇರುವ ಎಲ್ಲಾ ಹೋಂಸ್ಟೇಗಳಿಗೆ ಹಾಗೂ ನೂತನವಾಗಿ ಸ್ಥಾಪಿಸಲು ಉದ್ದೇಶಿಸಿರುವ ಹೋಂಸ್ಟೇಗಳಿಗೂ ಅನ್ವಯಿಸುತ್ತವೆ.

## III ಹೋಂಸ್ಟೇಗಳನ್ನು ರೇಟಿಂಗ್ ಮಾಡಿಸುವ ಬಗ್ಗೆ:

25. ಈಗಾಗಲೇ ಈ ಹಿಂದೆ ನೊಂದಣಿ ಹೊಂದಿರುವ ಹೋಂಸ್ಟೇ, ಪ್ರಸ್ತುತ ನೊಂದಣಿ ಪಡೆಯುತ್ತಿರುವ ಹೋಂಸ್ಟೇ ಘಟಕಗಳು ಪ್ರವಾಸೋದ್ಯಮ ಇಲಾಖೆಯ ಎಂಪ್ಯಾನಲ್ಡ್ ರೇಟಿಂಗ್ ಏಜೆನ್ಸಿಗಳ ಮೂಲಕ ಶ್ರೇಣಿಗಳನ್ನು ಪಡೆಯಬಹುದಾಗಿದೆ.

26. ಎಂಪ್ಯಾನಲ್ಡ್ ರೇಟಿಂಗ್ ಏಜೆನ್ಸಿಗಳು ಹೋಂಸ್ಟೇಗಳಿಗೆ ನೀಡಿದ ಶ್ರೇಣಿಗಳು ವಾರ್ಷಿಕ ಪರಿವೀಕ್ಷಣೆಯ ಆಧಾರದ ಮೇಲೆ 3 (ಮೂರು) ವರ್ಷಗಳ ಅವಧಿಯವರೆಗೆ ಮಾತ್ರ ಜಾರಿಯಲ್ಲಿರುತ್ತದೆ.

27. ಎಂಪ್ಯಾನಲ್ಡ್ ರೇಟಿಂಗ್ ಏಜೆನ್ಸಿಗಳ ವಿವರ, ಯಾವ ಮಾನದಂಡಗಳ ಆಧಾರದ ಮೇಲೆ ಹೋಂಸ್ಟೇಗಳನ್ನು ವರ್ಗೀಕರಿಸಲಾಗುವುದು ಹಾಗೂ ನೀಡಲಾದ ಶ್ರೇಣಿಯ ಅವಧಿ ಮುಂತಾದ ವಿವರಗಳು ಪ್ರವಾಸೋದ್ಯಮ ಇಲಾಖೆಯ ಅಂತರ್ಜಾಲ ವಿಳಾಸ: http://www.karnatakatourism.org.ದಲ್ಲಿ ಲಭ್ಯವಿರುತ್ತದೆ.

28. ಎಂಪ್ಯಾನಲ್ಡ್ ರೇಟಿಂಗ್ ಏಜೆನ್ಸಿಗಳು ಹೋಂಸ್ಟೇ ಘಟಕಗಳಿಗೆ ನೀಡುವ ಶ್ರೇಣಿಗಳು ಅಂತಿಮವಾಗಿದ್ದು ಹಾಗೂ ಇವುಗಳನ್ನು ಪ್ರವಾಸೋದ್ಯಮ ಇಲಾಖೆಯ ಅಂತರ್ಜಾಲ ವಿಳಾಸದಲ್ಲಿ (website) ಪ್ರದರ್ಶಿಸಲಾಗುವುದು.

29. ಹೋಂಸ್ಟೇ ಘಟಕಗಳು ರೇಟಿಂಗ್ ಏಜೆನ್ಸಿಗಳು ನೀಡಿದ ಶ್ರೇಣಿ ಪ್ರಮಾಣ ಪತ್ರವನ್ನು ಹೋಂಸ್ಟೇ ಆವರಣದ ಪ್ರಮುಖ ಸ್ಥಳದಲ್ಲಿ ಹಾಗೂ ಸಂಖ್ಯೆಯನ್ನು ನಾಮಫಲಕದಲ್ಲಿ ಪ್ರದರ್ಶಿಸುವುದು.

30. ಆಗಾಗ್ಗೆ ಮೇಲ್ವಿಚಾರಣೆಯನ್ನು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ನಡೆಸುವುದು.

31. ರೇಟಿಂಗ್ ಏಜೆನ್ಸಿಗಳು ವಿಧಿಸಬಹುದಾದ ಗರಿಷ್ಠ ಶುಲ್ಕವು ರೂ.25,000/-[ರೂ. ಇಪ್ಪತ್ತೈದು ಸಾವಿರಗಳು ಮಾತ್ರ]ಗಳನ್ನು ಮೀರತಕ್ಕದ್ದಲ್ಲ.

32. ನೋಂದಣಿಯಾದ ನಂತರ ಹೋಂಸ್ಟೇಗಳ ಮಾಲೀಕರು ರೇಟಿಂಗ್ ಮಾಡಿಸುವುದು ಐಚ್ಛಿಕವಾಗಿರುತ್ತದೆ. ನೋಂದಣಿ ಮಾಡಿದ ಮತ್ತು ರೇಟಿಂಗ್ ಮಾಡಿದ ಹೋಂಸ್ಟೇ ವಿವರಗಳನ್ನು ಇಲಾಖೆ ವೆಬ್ ಸೈಟ್ ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಅಳವಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
13/X/16
[ಬಿ.ಎನ್. ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ.
4. ಶಾಖಾ ರಕ್ಷಾ ಕಡತ

# ಅನುಬಂಧ-3

| ಕ್ರ.ಸಂ | ಜಿಲ್ಲೆಗಳ ಹೆಸರು | ತಾಲ್ಲೂಕುವಾರು | ಹೋಂ ಸ್ಟೇ | ರೆಸಾರ್ಟ್ | ಒಟ್ಟು ಸಂಖ್ಯೆ |
|---|---|---|---|---|---|
| 1 | ರಾಯಚೂರು | 1.ದೇವದುರ್ಗ | – | – | – |
| | | 2.ಲಿಂಗಸುಗೂರು | – | – | – |
| | | 3.ಮಾನ್ವಿ | – | – | – |
| | | 4.ರಾಯಚೂರು | – | – | – |
| | | 5.ಸಿಂಧನೂರು | – | – | – |
| 2 | ಬಾಗಲಕೋಟೆ | 1.ಬಾದಾಮಿ–2 | – | 2 | 2 |
| | | 2.ಬಾಗಲಕೋಟೆ | – | – | – |
| | | 3.ಬೀಳಗಿ | – | – | – |
| | | 4.ಹುನಗುಂದ್ | – | – | – |
| | | 5.ಜಮಖಂಡಿ | – | 1 | 1 |
| | | 6.ಮುಧೋಳ್ | – | – | – |
| 3 | ಬೆಂಗಳೂರು [ನಗರ] | 1.ಆನೇಕಲ್ | 1 | – | 1 |
| | | 2.ಬೆಂಗಳೂರು ಉತ್ತರ | 2 | – | 2 |
| | | 3.ಬೆಂಗಳೂರು ದಕ್ಷಿಣ | 1 | – | 1 |
| | | 4.ಬೆಂಗಳೂರು ಪೂರ್ವ | – | – | – |
| 4 | ಬೆಂಗಳೂರು ಗ್ರಾಮಾಂತರ | 1.ದೇವನಹಳ್ಳಿ | 1 | – | 1 |
| | | 2.ದೊಡ್ಡಬಳ್ಳಾಪುರ | 2 | – | 2 |
| | | 3.ಹೊಸಕೋಟೆ | – | – | – |
| | | 4.ನೆಲಮಂಗಲ | 1 | – | 1 |
| 5 | ಬಳ್ಳಾರಿ | 1.ಬಳ್ಳಾರಿ | – | – | – |
| | | 2.ಹೆಚ್.ಬಿ.ಹಳ್ಳಿ | – | – | – |
| | | 3.ಹಡಗಲಿ | – | – | – |
| | | 4.ಹೊಸಪೇಟೆ | – | 2 | 2 |
| | | 5.ಕೂಡ್ಲಗಿ | – | – | – |
| | | 6.ಸಂಡೂರು | – | – | – |
| | | 7.ಸಿರಗುಪ್ಪ | – | – | – |
| 6 | ಬೀದರ್ | 1.ಔರಾದ್ | – | – | – |
| | | 2.ಬಸವಕಲ್ಯಾಣ | – | – | – |
| | | 3.ಭಾಲ್ಕಿ | – | – | – |
| | | 4.ಬೀದರ್ | – | – | – |
| | | 5.ಹುಮ್ನಾಬಾದ್ | – | – | – |
| 7 | ವಿಜಯಪುರ | 1.ಬಸವನ ಬಾಗೇವಾಡಿ | – | – | – |
| | | 2.ವಿಜಾಪುರ | – | 1 | 1 |
| | | 3.ಇಂಡಿ | – | – | – |
| | | 4.ಮುದ್ದೇಬಿಹಾಳ | – | – | – |
| | | 5.ಸಿಂಧಗಿ | – | – | – |

| ಕ್ರಸಂ | ಜಿಲ್ಲೆಗಳ ಹೆಸರು | ತಾಲ್ಲೂಕುವಾರು | ಹೋಂ ಸ್ಟೇ | ರೆಸಾರ್ಟ್ | ಒಟ್ಟು ಸಂಖ್ಯೆ |
|---|---|---|---|---|---|
| 8 | ಚಾಮರಾಜನಗರ | 1.ಚಾಮರಾಜನಗರ | – | 1 | 1 |
| | | 2.ಗುಂಡ್ಲುಪೇಟೆ | 4 | 1 | 5 |
| | | 3.ಕೊಳ್ಳೇಗಾಲ | – | – | – |
| | | 4.ಯಳಂದೂರು | – | – | – |
| 9 | ಚಿಕ್ಕಬಳ್ಳಾಪುರ | 1.ಬಾಗೇಪಲ್ಲಿ | – | 1 | 1 |
| | | 2.ಚಿಕ್ಕಬಳ್ಳಾಪುರ | 2 | – | 2 |
| | | 3.ಚಿಂತಾಮಣಿ | – | 1 | 1 |
| | | 4.ಗೌರಿಬಿದನೂರು | 1 | 1 | 2 |
| | | 5.ಗುಡಿಬಂಡೆ | – | – | – |
| | | 6.ಶಿಡ್ಲಘಟ್ಟ | – | – | – |
| 10 | ದಾವಣಗೆರೆ | 1.ಚನ್ನಗಿರಿ | – | – | – |
| | | 2.ದಾವಣಗೆರೆ | – | 1 | 1 |
| | | 3.ಹರಿಹರ | – | – | – |
| | | 4.ಹರಪನಹಳ್ಳಿ | – | – | – |
| | | 5.ಹೊನ್ನಾಳಿ | – | – | – |
| | | 6.ಜಗಳೂರು | – | – | – |
| 11 | ಧಾರವಾಡ | 1.ಧಾರವಾಡ | 1 | – | 1 |
| | | 2.ಹುಬ್ಬಳ್ಳಿ | – | – | – |
| | | 3.ಕಲಘಟಗಿ | – | – | – |
| | | 4.ಕುಂದಗೋಳ | – | – | – |
| | | 5.ನವಲಗುಂದ | – | – | – |
| 12 | ಕಲಬುರಗಿ | 1.ಅಫ್ಜಲ್ಪುರ | – | – | – |
| | | 2.ಆಳಂದ | – | – | – |
| | | 3.ಚಿಂಚೋಳಿ | – | – | – |
| | | 4.ಚಿತ್ತಾಪುರ | – | – | – |
| | | 5.ಕಲಬುರ್ಗಿ | – | – | – |
| | | 6.ಜೇವರ್ಗಿ | – | – | – |
| 13 | ಗದಗ | 1.ಗದಗ | – | – | – |
| | | 2.ಮುಂಡರಗಿ | – | – | – |
| | | 3.ನರಗುಂದ | – | – | – |
| | | 4.ರೋಣ | – | – | – |
| | | 5.ಶಿರಹಟ್ಟಿ | – | – | – |
| 14 | ಹಾಸನ | 1.ಆಲೂರು | 1 | – | 1 |
| | | 2.ಅರಕಲಗೂಡು | 0 | 3 | 3 |
| | | 3.ಅರಸಿಕೆರೆ | 0 | 0 | 0 |
| | | 4.ಬೇಲೂರು | 1 | 3 | 4 |
| | | 5.ಚನ್ನರಾಯಪಟ್ಟಣ | 0 | 3 | 3 |
| | | 6.ಹಾಸನ | 1 | 13 | 14 |
| | | 7.ಹೊಳೆನರಸೀಪುರ | 0 | 1 | 1 |
| | | 8.ಸಕಲೇಶಪುರ | 38 | 5 | 43 |

| ಕ್ರ.ಸಂ | ಜಿಲ್ಲೆಗಳ ಹೆಸರು | ತಾಲ್ಲೂಕುವಾರು | ಹೋಂ ಸ್ಟೇ | ರೆಸಾರ್ಟ್ | ಒಟ್ಟು ಸಂಖ್ಯೆ |
|---|---|---|---|---|---|
| 15 | ಹಾವೇರಿ | 1.ಬ್ಯಾಡಗಿ | – | – | – |
| | | 2.ಹಾನಗಲ್ | – | – | – |
| | | 3.ಹಾವೇರಿ | – | – | – |
| | | 4.ಹಿರೇಕೆರೂರು | – | – | – |
| | | 5.ರಾಣೆಬೆನ್ನೂರು | – | – | – |
| | | 6.ಸವಣೂರು | – | – | – |
| | | 7.ಶಿಗ್ಗಾಂವಿ | – | – | – |
| 16 | ಕೊಡಗು | 1.ಮಡಿಕೇರಿ | 272 | 7 | 279 |
| | | 2.ಸೋಮವಾರಪೇಟೆ | 88 | 10 | 98 |
| | | 3.ವಿರಾಜಪೇಟೆ | 87 | 02 | 89 |
| 17 | ಚಿಕ್ಕಮಗಳೂರು | 1.ಚಿಕ್ಕಮಗಳೂರು | 227 | 9 | 236 |
| | | 2.ಕಡೂರು | 1 | – | 1 |
| | | 3.ಕೊಪ್ಪ | 16 | – | 16 |
| | | 4.ಮೂಡಿಗೆರೆ | 98 | 2 | 100 |
| | | 5.ಎನ್.ಆರ್.ಪುರ | 1 | – | 1 |
| | | 6.ಶೃಂಗೇರಿ | 7 | – | 7 |
| | | 7.ತರಿಕೆರೆ | 5 | – | 5 |
| 18 | ಚಿತ್ರದುರ್ಗ | 1.ಚಳ್ಳಕೆರೆ | – | – | – |
| | | 2.ಚಿತ್ರದುರ್ಗ | – | – | – |
| | | 3.ಹಿರಿಯೂರು | – | – | – |
| | | 4.ಹೊಳಲ್ಕೆರೆ | – | – | – |
| | | 5.ಹೊಸದುರ್ಗ | 0 | 1 | 1 |
| | | 6.ಮೊಳಕಾಲ್ಮೂರು | – | – | – |
| 19 | ಉಡುಪಿ | 1.ಕಾರ್ಕಳ | 8 | 2 | 10 |
| | | 2.ಕುಂದಾಪುರ | 6 | 3 | 9 |
| | | 3.ಉಡುಪಿ | 17 | 6 | 23 |
| 20 | ಯಾದಗಿರಿ | 1.ಶಹಾಪುರ | – | – | – |
| | | 2.ಸುರಪುರ | – | – | – |
| | | 3.ಯಾದಗಿರಿ | – | – | – |
| 21 | ಕೋಲಾರ | 1.ಬಂಗಾರಪೇಟೆ | – | – | – |
| | | 2.ಕೋಲಾರ | – | – | – |
| | | 3.ಮಾಲೂರು | – | – | – |
| | | 4.ಮುಳಬಾಗಲು | – | – | – |
| | | 5.ಶ್ರೀನಿವಾಸಪುರ | – | – | – |
| 22 | ಕೊಪ್ಪಳ | 1.ಗಂಗಾವತಿ | – | – | – |
| | | 2.ಕೊಪ್ಪಳ | – | – | – |
| | | 3.ಕುಷ್ಟಗಿ | – | – | – |
| | | 4.ಯಲಬುರ್ಗ | – | – | – |

| ಕ್ರ.ಸಂ | ಜಿಲ್ಲೆಗಳ ಹೆಸರು | ತಾಲ್ಲೂಕುವಾರು | ಹೋಂ ಸ್ಟೇ | ರೆಸಾರ್ಟ್ | ಒಟ್ಟು ಸಂಖ್ಯೆ |
|---|---|---|---|---|---|
| 23 | ಮಂಡ್ಯ | 1.ಕೃಷ್ಣರಾಜಪೇಟೆ | – | – | – |
| | | 2.ಮದ್ದೂರು | – | – | – |
| | | 3.ಮಳವಳ್ಳಿ | 3 | – | 3 |
| | | 4.ಮಂಡ್ಯ | – | – | – |
| | | 5.ನಾಗಮಂಗಲ | – | – | – |
| | | 6.ಪಾಂಡವಪುರ | 1 | – | 1 |
| | | 7.ಶ್ರೀರಂಗಪಟ್ಟಣ | – | – | – |
| 24 | ಮೈಸೂರು | 1.ಹೆಚ್.ಡಿ.ಕೋಟೆ | – | – | – |
| | | 2.ಹುಣಸೂರು | – | – | – |
| | | 3.ಕೆ.ಆರ್.ನಗರ | – | – | – |
| | | 4.ಮೈಸೂರು | 2 | – | 2 |
| | | 5.ನಂಜನಗೂಡು | – | – | – |
| | | 6.ಪಿರಿಯಾಪಟ್ಟಣ | 1 | 2 | 3 |
| | | 7.ಟಿ.ನರಸೀಪುರ | – | – | – |
| 25 | ರಾಮನಗರ | 1.ಚೆನ್ನಪಟ್ಟಣ | – | – | – |
| | | 2.ಕನಕಪುರ | 2 | – | 2 |
| | | 3.ಮಾಗಡಿ | – | – | – |
| | | 4.ರಾಮನಗರ | 2 | – | 2 |
| 26 | ಶಿವಮೊಗ್ಗ | 1.ಭದ್ರಾವತಿ | – | – | – |
| | | 2.ಹೊಸನಗರ | 6 | – | 6 |
| | | 3.ಸಾಗರ | 2 | – | 2 |
| | | 4.ಶಿಕಾರಿಪುರ | – | – | – |
| | | 5.ಶಿವಮೊಗ್ಗ | 2 | – | 2 |
| | | 6.ಸೊರಬ | – | – | – |
| | | 7.ತೀರ್ಥಹಳ್ಳಿ | 18 | – | 18 |
| 27 | ತುಮಕೂರು | 1.ಚಿಕ್ಕನಾಯಕಹಳ್ಳಿ | – | – | – |
| | | 2.ಗುಬ್ಬಿ | – | – | – |
| | | 3.ಕೊರಟಗೆರೆ | – | – | – |
| | | 4.ಕುಣಿಗಲ್ | – | – | – |
| | | 5.ಮಧಗಿರಿ | – | – | – |
| | | 6.ಪಾವಗಡ | – | – | – |
| | | 7.ಶಿರಾ | – | – | – |
| | | 8.ತಿಪಟೂರು | – | – | – |
| | | 9.ತುಮಕೂರು | – | – | – |
| | | 10.ತುರವೇಕೆರೆ | – | – | – |
| 28 | ದಕ್ಷಿಣ ಕನ್ನಡ | 1.ಬಂಟ್ವಾಳ | 2 | – | 2 |
| | | 2.ಬೆಳ್ತಂಗಡಿ | 2 | 2 | 4 |
| | | 3.ಮಂಗಳೂರು | 26 | 2 | 28 |
| | | 4.ಪುತ್ತೂರು | – | 1 | 1 |
| | | 5.ಸುಳ್ಯ | 2 | – | 2 |

| ಕ್ರಸಂ | ಜಿಲ್ಲೆಗಳ ಹೆಸರು | ತಾಲ್ಲೂಕುವಾರು | ಹೋಂ ಸ್ಟೇ | ರೆಸಾರ್ಟ್ | ಒಟ್ಟು ಸಂಖ್ಯೆ |
|---|---|---|---|---|---|
| 29 | ಬೆಳಗಾವಿ | 1.ಅಥಣಿ | – | 8 | 8 |
| | | 2.ಬೈಲಹೊಂಗಲ | – | 4 | 4 |
| | | 3.ಬೆಳಗಾವಿ | – | 9 | 9 |
| | | 4.ಚಿಕ್ಕೋಡಿ | – | 1 | 1 |
| | | 5.ಗೋಕಾಕ್ | – | 6 | 6 |
| | | 6.ಹುಕ್ಕೇರಿ | – | 5 | 5 |
| | | 7.ಖಾನಪುರ | – | 2 | 2 |
| | | 8.ರಾಯಭಾಗ್ | – | 9 | 9 |
| | | 9.ರಾಮದುರ್ಗ | – | 6 | 6 |
| | | 10.ಸವದತ್ತಿ | – | 6 | 6 |
| 30 | ಉತ್ತರ ಕನ್ನಡ | 1.ಅಂಕೋಲ | 2 | – | 2 |
| | | 2.ಭಟ್ಕಳ | 1 | – | 1 |
| | | 3.ಹಳಿಯಾಳ | 18 | 4 | 22 |
| | | 4.ಹೊನ್ನಾವರ | 3 | – | 3 |
| | | 5.ಜೋಯ್ಡಾ (ಸೂಪಾ) | 59 | 1 | 60 |
| | | 6.ಕಾರವಾರ | 5 | – | 5 |
| | | 7.ಕುಮಟ | 16 | – | 16 |
| | | 8.ಮುಂಡಗೋಡ | – | – | – |
| | | 9.ಸಿದ್ದಾಪುರ | 5 | – | 5 |
| | | 10.ಶಿರಸಿ | 11 | – | 11 |
| | | 11.ಯಲ್ಲಾಪುರ | 3 | – | 3 |
| | ಒಟ್ಟು | | 1084 | 150 | 1234 |